ಕುಮಟಾ ಅವರ ಮಾರ್ಗದರ್ಶನದಲ್ಲಿ ನಾನು ಸಂಶೋಧನೆ ಕೈಗೊಂಡೆ. ನಮ್ಮ ಲ್ಯಾಬ್‌ನಲ್ಲಿ ಡಾ. ಪ್ರಭಾಕರ್ ಸಾವಂತ್ ಕೂಡಾ ಇದ್ದರು. ಕುಮಟಾ ಮತ್ತು ಸಾವಂತ್, ಯುನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾ(ಡೇವಿಸ್)ದ ಡಾ. ಎ.ಎಲ್. ಟ್ಯಾಪೆಲ್‌ರ ಜೊತೆಗೂಡಿ ಪ್ರಪ್ರಥಮವಾಗಿ ಇಲಿಯ ಯಕೃತ್ತಿನ ಜೀವಕೋಶಗಳಿಂದ ಲೈಸೋಸೋಮ್‌ಗಳನ್ನು ಸೆಂಟ್ರಿಫ್ಯುಗೇಷನ್ ಮೂಲಕ ಪ್ರತ್ಯೇಕಿಸಿ ಶುದ್ಧೀಕರಿಸಿದ ಕೀರ್ತಿಗೆ ಪಾತ್ರರಾದರು. ನಾನು ಲೈಸೋಸೋಮ್‌ಗಳಲ್ಲಿ ಇರುವ ಕಿಣ್ವಗಳ ಅಧ್ಯಯನ ಆರಂಭಿಸಿದೆ. ಮುಖ್ಯವಾಗಿ ನನ್ನ ಲಕ್ಷ್ಯ ಪ್ರೋಟೀನ್ ಮತ್ತು ಸಂಕೀರ್ಣ ಕಾರ್ಬೋಹೈಡ್ರೇಟನ್ನು ವಿಭಜಿಸುವ ಕಿಣ್ವಗಳ ಕಡೆಗಿತ್ತು. ಮಾಂಸಜನ್ಯ ಆಹಾರಗಳ ಕೆಡುವಿಕೆಗೆ ಬ್ಯಾಕ್ಟೀರಿಯಾ ಜೊತೆ ಈ ಕಿಣ್ವಗಳು ಹೇಗೆ ಪೂರಕವಾಗಿ ಕೆಲಸ ಮಾಡುತ್ತವೆ ಎನ್ನುವ ಕುರಿತು ಅಧ್ಯಯನ ನಡೆಸುತ್ತ ಬಂದೆ. ಈ ಸಮಯದಲ್ಲಿ **International Atomic Energy Agency (IAEA)** ಫೆಲೋಶಿಪ್‌ಗೆ ನನ್ನ ಹೆಸರನ್ನು ಶಿಫಾರಸು ಮಾಡಲಾಯಿತು. ಈ ಮುಖಾಂತರ ಅಮೆರಿಕದ ಮಿಶಿಗನ್ ಸ್ಟೇಟ್ ಯುನಿವರ್ಸಿಟಿ ಮತ್ತು ಯುನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾ(ಡೇವಿಸ್)ಗಳಲ್ಲಿ ಸಂಶೋಧನಾ ಕಾರ್ಯ ನಿರ್ವಹಿಸುವ ಅವಕಾಶ ನನಗೊದಗಿತು.

ಮಿಶಿಗನ್ ಸ್ಟೇಟ್ ಯುನಿವರ್ಸಿಟಿಯಲ್ಲಿ ವಿಶ್ವವಿಖ್ಯಾತ ಆಹಾರ ತಂತ್ರಜ್ಞಾನದ ಪರಿಣತ ಡಾ. ವಾಲ್ಟರ್ ಅರ್ಬೆನ್‌ರ ನೇತೃತ್ವದಲ್ಲಿ ಕೆಲಸ ಮಾಡಿದ ಬಳಿಕ ಯುನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾ(ಡೇವಿಸ್)ದ ಡಾ. ಎ.ಎಲ್. ಟ್ಯಾಪೆಲ್‌ರ ಲ್ಯಾಬೊರೇಟರಿ ಸೇರಿಕೊಂಡೆ. ಮೊದಲೇ ಹೇಳಿದಂತೆ, ಲೈಸೋಸೋಮ್‌ಗಳ ಕುರಿತಾದ ಅಧ್ಯಯನಕ್ಕೆ ಹೆಸರುವಾಸಿಯಾದ ಇವರ ಲ್ಯಾಬೊರೇಟರಿಯಲ್ಲಿ ಲೈಸೋಸೋಮ್‌ಗಳಲ್ಲಿರುವ ಕೆಥೆಪ್ಸಿನ್ ಬಿ2 (**CathepsinB2**)

◆ **ಬರವಣಿಗೆ ಎಂದರೇನು ನಿಮ್ಮ ಪಾಲಿಗೆ?**

ಬರವಣಿಗೆ ಎಂದರೆ ನನ್ನ ಪಾಲಿಗೆ ಹಾಗೆ ಹೀಗೆ ಎಂದು ಹೇಳುವ ಧಾರ್ಷ್ಟ್ಯ ನನಗಿಲ್ಲ. ನನಗಂತೂ ಅದೊಂದು ಒತ್ತಾಯ. ಈ ಒತ್ತಾಯ ಸ್ವಂತದ್ದೂ ಆಗಿರಬಹುದು, ಹೊರಗಿನದ್ದೂ ಆಗಿರಬಹುದು. ಈ ಬಾಹ್ಯ ಒತ್ತಡ ಬಹಳ ಮಂದಿಯಿಂದ ಬಂದಿದೆ. ಸೋಮಾರಿಯಾದ ನನಗೆ ಬಾಹ್ಯ ಒತ್ತಾಯ ಇಲ್ಲದೇ ಹೋಗಿದ್ದರೆ ನಾನು ಇಷ್ಟು ಬರವಣಿಗೆ ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಈಶ್ವರಯ್ಯ, ಜಿ.ಬಿ. ಜೋಶಿ, ವ್ಯಾಸರಾಯ ಬಲ್ಲಾಳ, ಜಯಂತ ಕಾಯ್ಕಿಣಿ ಮೊದಲಾದವರು ನನ್ನ 'ಶಸ್ತ್ರ ಸನ್ಯಾಸ' ಬಿಡಿಸಿದವರು.

